ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮೂರವತ್ತೇಳನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ದಕ್ಷಿಣ ಕನ್ನಡದ ಕೊಯ್ಲಾ ಪಶುಸಂಗೋಪನಾ ಕೇಂದ್ರ

೧೭೭೮. **ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ).**—ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್, ವಕ್ಫ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೇ.

ಅ) ದಕ್ಷಿಣ ಕನ್ನಡದ ಕೊಯ್ಲಾದಲ್ಲಿ ಕಳೆದ ೩ ವರ್ಷಗಳಿಂದಿರುವ ಪಶುಸಂಗೋಪನಾ ಕೇಂದ್ರವು ಲಾಭದಲ್ಲಿದೆಯೋ ಅಥವಾ ನಷ್ಟದಲ್ಲಿದೆಯೇ?

ಆ) ೧೯೮೮ನೇ ಮಾರ್ಚ್ ಅಖೈರ್‌ವರೆಗೆ ಹಾಗೂ ಹಾಲಿ ಇರುವ ಎಮ್ಮೆ, ಕೋಣ, ಹಸು, ಹಂದಿಗಳ ಸಂಖ್ಯೆ ಎಷ್ಟು?

ಇ) ಸದರಿ ಕೇಂದ್ರದಲ್ಲಿ ಉತ್ಪಾದಿಸಲಾಗುತ್ತಿರುವ ಹಾಲು ಜಿಲ್ಲೆಗೆ ಪೂರೈಸಲಾಗುವುದೇ?

ಈ) ಈ ಕೇಂದ್ರ ಅಭಿವೃದ್ಧಿ ಆಗಿರುವುದು ಸಮಾಧಾನಕರವಾಗಿದೆಯೇ, ಅಲ್ಲಿನ ಆಡಳಿತದಲ್ಲಿ ಕುಂದುಕೊರತೆಗಳೇನಾದರೂ ಇದೆಯೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ನಷ್ಟದಲ್ಲಿದೆ.

ಈ ಜಾನುವಾರು ಕ್ಷೇತ್ರವನ್ನು ಕೇವಲ ಲಾಭಗಳಿಕೆಯ ಉದ್ದೇಶದಿಂದ ಸ್ಥಾಪನೆ ಮಾಡಿರುವುದಿಲ್ಲ ಮತ್ತು ಈ ಕೆಳಗೆ ತಿಳಿಸಿರುವ ಪಶುಪಾಲನೆ ಚಟುವಟಿಕೆಗಳ ಅಭಿವೃದ್ಧಿ ಮತ್ತು ವಿಸ್ತರಣಾ ಕಾರ್ಯಕ್ರಮಗಳ ಮಾದರಿ ಕ್ಷೇತ್ರವಾಗಿದೆ.

೧) ಒಳ್ಳೆಯ ವಂಶಾವಳಿಯ ಹೋರಿ ಕರುಗಳನ್ನು ಉತ್ಪಾದಿಸಿ, ಕೃತಕ ಗರ್ಭಧಾರಣಾ ಪ್ರಯೋಗಕ್ಕಾಗಿ ಸರಬರಾಜು ಮಾಡಲಾಗುತ್ತಿದೆ.

೨) ಉತ್ತಮ ತಳಿಯ ವಿವಿಧ ಜಾತಿಯ ಹುಲ್ಲನ್ನು ಬೆಳೆಸಿ ಅದರ ಬೇರು ಮತ್ತು ಬೀಜಗಳನ್ನು ರೈತರಿಗೆ ಒದಗಿಸಲಾಗುತ್ತಿದೆ.

೩) ರೈತರಿಗೆ ಪಶುಪಾಲನೆಯ ವಿವಿಧ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತಿದೆ.

೪) ಉತ್ತಮ ತಳಿಯ ಕೋಳಿ ಮರಿಗಳ ಸಾಕಾಣಿಕೆ ಮತ್ತು ಅವುಗಳನ್ನು ರೈತರಿಗೆ ಸರಬರಾಜು ಮಾಡುವುದು.

೫) ರೈತರಿಗೆ ಪಶುವೈದ್ಯ ಸೇವೆಯನ್ನು ಒದಗಿಸುವುದು.

೬) ಆರೋಗ್ಯಕರವ ದ ಹಾಲನ್ನು ಉತ್ಪಾದಿಸಿ ಡೈರಿಗೆ ಸರಬರಾಜು ಮಾಡುವುದು.

ಆ) ದಿನಾಂಕ ೩೧-೩-೮೮ಕ್ಕೆ

	ಎಮ್ಮೆ	ಕೋಣ	ಹಸು	ಹಂದಿ	ಕೋಳಿ
ಇದ್ದವುಗಳು ...	೨೯	ಇಲ್ಲ	೧೩೯	೬೭	೩೮
ಹಾಲಿ ಇರುವುವು ...	೨೯	ಇಲ್ಲ	೧೪೦	೬೩	೪೩೭

ಇ) ಇಡೀ ಜಿಲ್ಲೆಗೆ ಹಾಲು ಪೂರೈಸುವ ಉದ್ದೇಶವಿಲ್ಲ. ಆದರೆ ಉತ್ಪತ್ತಿ ಆದ ಹಾಲನ್ನು ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಮಂಗಳೂರು, ಇವರಿಗೆ ಸರಬರಾಜು ಮಾಡಲಾಗುತ್ತಿದೆ.

ಈ) ಅಭಿವೃದ್ಧಿ ಕಾರ್ಯಗಳು ಸಮಾಧಾನಕರವಾಗಿವೆ. ಅಲ್ಲಿನ ಆಡಳಿತದಲ್ಲಿನ ಕುಂದುಕೊರತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕದಲ್ಲಿ ವಿದ್ಯುತ್ತಿನ ಉತ್ಪಾದನೆ

೧೬೭೯. ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲು).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಕರ್ನಾಟಕದಲ್ಲಿ ಉತ್ಪನ್ನವಾದ ವಿದ್ಯುತ್ತಿನ ಒಟ್ಟು ಪ್ರಮಾಣವೆಷ್ಟು?

ಆ) ರಾಜ್ಯದಲ್ಲಿ ವಿದ್ಯುತ್ತಿಗೆ ಇರುವ ಒಟ್ಟು ಬೇಡಿಕೆ ಎಷ್ಟು?

ಇ) ವಿದ್ಯುತ್ ಉತ್ಪಾದನೆಯಂನ್ನು ಹೆಚ್ಚಿಸುವುದರ ಸಲುವಾಗಿ ಹೊಸ ಸಂಪನ್ಮೂಲಗಳನ್ನು ಹುಡುಕುವುದು ಅಥವಾ ಯೋಜನೆಗಳನ್ನು ರಚಿಸುವುದು?

ಈ) ಪ್ರಸರಣಾ ನಷ್ಟ ಮತ್ತು ಈ ನಷ್ಟವನ್ನು ತಡೆಯಲು ತೆಗೆದುಕೊಂಡ ಕ್ರಮಗಳು,

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು)

ಅ) ತುಂಗಭದ್ರಾ ಡ್ಯಾಂನ ಕರ್ನಾಟಕ ಪಾಲು ಸೇರಿದಂತೆ ರಾಜ್ಯದಲ್ಲಿ ಉತ್ಪನ್ನವಾದ ವಿದ್ಯುತ್ ಪ್ರಮಾಣ ಹೀಗಿದೆ.

೧೯೮೬–೮೭	...	೭೮೨೩ ಮಿಲಿಯನ್ ಯೂನಿಟ್‌ಗಳು
೧೯೮೭–೮೮	...	೭೫೭೦ ಮಿಲಿಯನ್ ಯೂನಿಟ್‌ಗಳು

ಆ) ೧೯೮೭–೮೮ನೇ ಸಾಲಿನಲ್ಲಿ ಅನಿರ್ಬಂಧಿತ ಬೇಡಿಕೆಯನ್ನು ಪ್ರಮಾಣ ೧೬,೯೮೦ ಮಿಲಿಯನ್ ಯೂನಿಟ್‌ಗಳು.

ಇ) ಕಾರ್ಯಗತವಾಗುತ್ತಿರುವ ಯೋಜನೆಗಳು:—ಪರಾಹಿ (೨೫೯ ಮೆ.ವ್ಯಾ.) ಘಟಪ್ರಭಾ (೩೨ ಮೆ.ವ್ಯಾ.) ಕಾಳಿನದಿ ೨ನೇ ಹಂತ (೨೭೦ ಮೆ.ವ್ಯಾ.) ರಾಯಚೂರು ಮೂರನೇ ಹಂತ (೨೧೦ ಮೆ ವ್ಯಾ.)

ಕೆಳಕಂಡ ಯೋಜನೆಗಳನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ರಾಯಚೂರು ನಾಲ್ಕನೇ ಹಂತ (೨೧೦ ಮೆ.ವ್ಯಾ.) ಶರಾವತಿ ಟೇಲರೇಸ್ ಯೋಜನೆ (೨೪೨ ಮೆ.ವ್ಯಾ.) ನಾಲ್ಕು ಸಣ್ಣ ತೀಸೆಲ್ ಜನರೇಟರುಗಳು (೭೭ ಮೆ.ವ್ಯಾ.) ಯಲಹಂಕದ ಬಳಿ ಡಿಸೇಲ್ ಜನರೇಟರು (೧೨೦ ಮೆ.ವ್ಯಾ.)

ಅಲ್ಲದೆ ಈ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗಿದೆ. (೧) ಖಾಸಗಿ ವಲಯದಲ್ಲಿ ಕ್ಯಾಪ್ಟಿವ್ ಜನರೇಟರುಗಳ ಸ್ಥಾಪನೆಗಾಗಿ ಪ್ರೋತ್ಸಾಹ. (೨) ಕೇಂದ್ರ ಮತ್ತು ನೆರೆ ರಾಜ್ಯಗಳಿಂದ ಅಧಿಕ ಪ್ರಮಾಣದ ವಿದ್ಯುತ್ತನ್ನು ಪಡೆಯಲು ಪ್ರಯತ್ನಿಸುವುದು. (೩) ವಿವಿಧ ವರ್ಗಗಳ ಗ್ರಾಹಕರು ಬಳಸುವ ವಿದ್ಯುತ್ತಿನ ಪ್ರಮಾಣದಲ್ಲಿ (ಜೆಪ್ ಸೆಟ್ಟುಗಳನ್ನು ಬಿಟ್ಟು) ಕಡಿತವನ್ನು ವಿಧಿಸಲಾಗಿದೆ.

ಈ) ೧೯೮೭–೮೮ನೇ ಸಾಲಿನಲ್ಲಿ ಪ್ರಸರಣ ಮತ್ತು ವಿತರಣ ನಷ್ಟವು ಶೇಕಡಾ ೨೧ರಷ್ಟು ಎಂದು ಅಂದಾಜು ಮಾಡಲಾಗಿದೆ. ನಷ್ಟವನ್ನು ಕಡಿಮೆ ಮಾಡಲು ತೆಗೆದುಕೊಂಡ ಕ್ರಮಗಳು ಕೆಳಗಿನಂತಿವೆ.

ಅ) ಹೊಸ ಹೈಟೆನಷನ್ ಮತ್ತು ಎಕ್ಸ್‌ಟ್ರಾ ಹೈಟೆನ್ಷನ್ ಮಾರ್ಗಗಳನ್ನು ಆಳವಡಿಸುವುದು.

ಆ) ಲೋಡ್ ಎಕ್ಸ್‌ಟೆನ್ಷನ್‌ಗಳಲ್ಲಿ ೨೫೦, ೧೧೦, ೬೬ ಮತ್ತು ೩೩ ಹೊಸ ಕೇಂದ್ರಗಳನ್ನು ಸ್ಥಾಪಿಸುವುದು.

ಇ) ವಿತರಣಾ ಪದ್ಧತಿಯನ್ನು ಸಮರ್ಥಗೊಳಿಸುವುದು. ಟ್ರಾನ್ಸ್‌ಫಾರ್ಮರ್‌ಗಳ ರಿ–ಗ್ರೂಪ್ ಮಾಡುವುದು ಮತ್ತು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದು.